# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 2292 |
| ಸದಸ್ಯರ ಹೆಸರು | : ಡಾ: ತಳವಾರ್ ಸಾಬಣ್ಣ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | : 26.03.2026 |
| ಉತ್ತರಿಸುವ ಸಚಿವರು | : ಮಾನ್ಯ ಉಪ ಮುಖ್ಯಮಂತ್ರಿಗಳು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಚೌಡದಾನಪುರದಲ್ಲಿ ನೀರಾವರಿ ಇಲಾಖೆಯಿಂದ ಕಟ್ಟಿದ ಕಟ್ಟಡಗಳ ಸಂಖ್ಯೆ ಎಷ್ಟು; ಮತ್ತು ವೆಚ್ಚ ಮಾಡಿದ ಹಣ ವೆಷ್ಟು; | ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಚೌಡದಾನಪುರ ಮತ್ತು ಕಂಚಾರಗಟ್ಟಿಯಲ್ಲಿ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಗದ್ದುಗೆ ಬಳಿ ಅಭಿವೃದ್ಧಿಪಡಿಸುವ 16 ಕಾಮಗಾರಿಗಳನ್ನು ರೂ.31.39 ಕೋಟಿ ಮೊತ್ತದಲ್ಲಿ ಕರ್ನಾಟಕ ನೀರಾವರಿ ನಿಗಮದಿಂದ ಕೈಗೆತ್ತಿಕೊಳ್ಳಲಾಗಿದ್ದು, ಇದೂವರೆಗೆ ರೂ.26.05 ಕೋಟಿ ವೆಚ್ಚವಾಗಿರುತ್ತದೆ. |
| ಆ) | ಈ ಕಟ್ಟಡಗಳು ಈಗ ಯಾವ ಸಂಘಟನೆ/ಸಂಘದ ಸುಪರ್ಧಿಗೆ ಒಪ್ಪಿಸಲಾಗಿದೆ. | ಸದರಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, ಕಾಮಗಾರಿಯನ್ನು ಪೂರ್ಣಗೊಳಿಸಲು ದಿನಾಂಕ:31.05.2026 ರವರೆಗೆ ಕಾಲಾವಕಾಶವಿದ್ದು, ಈ ಕಟ್ಟಡಗಳನ್ನು ಯಾವುದೇ ಸಂಘಟನೆ/ಸಂಘದ ಸುಪರ್ದಿಗೆ ವಹಿಸಿರುವುದಿಲ್ಲ. |
| ಇ) | ಕೋಲಿ/ಕಬ್ಬಲಿಗ/ಅಂಬಿಗ/ಬೆಸ್ತ ಸಮುದಾಯಕ್ಕೆ ಅನುಕೂಲ ಮಾಡಿಕೊಡಲು ಕಟ್ಟಿದ ಕಟ್ಟಡ ಅವೈಜ್ಞಾನಿಕವಾಗಿದ್ದು ಇಂದು ಯಾವುದೇ ಉಪಯೋಗವಿಲ್ಲದೆ ಖಾಲಿ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಚೌಡಯ್ಯದಾನಪುರದ ಶ್ರೀ ನಿಜಶರಣ ಅಂಬಿಗರ ಚೌಡಯ್ಯ ಸುಕ್ಷೇತ್ರದಲ್ಲಿ ಕರ್ನಾಟಕ ನೀರಾವರಿ ನಿಗಮದಿಂದ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ. ಮುಂದುವರೆದು, ಬಯಲು ಸಭಾಂಗಣದಲ್ಲಿ 2025 ಹಾಗೂ 2026 ನೇ ಸಾಲಿನಲ್ಲಿ ಮಕರ ಸಂಕ್ರಾಂತಿಯಂದು ನಡೆಯುವ ಶರಣ ಸಂಸ್ಕೃತಿ ಮೇಳ ಹಾಗೂ ಜಾತ್ರೆಯು ವಿಜೃಂಭಣೆಯಿಂದ ನಡೆದಿರುತ್ತದೆ.<br>ಸದರಿ ಕಾಮಗಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ವಹಿಸಲಾಗಿದ್ದು, ಗುತ್ತಿಗೆ ನಿಯಮಾವಳಿಯಂತೆ ಕಾಮಗಾರಿಯ ಪ್ರಗತಿಗೆ ಅನುಗುಣವಾಗಿ ಬಿಲ್ ಪಾವತಿ ಮಾಡಲಾಗಿದೆ.<br>ಮುಂದುವರೆದು, ತುಂಗಭದ್ರಾ ನದಿಯಲ್ಲಿ ನೀರಿನ ಹರಿವು ಸುಮಾರು 2,50,000 ಕ್ಯೂಸೆಕ್ಸ್ ಬಂದಾಗ, ಕಟ್ಟಡದ ಪಕ್ಕದಲ್ಲಿರುವ ಹಳ್ಳದಲ್ಲಿ ಹರಿಯುವ ನೀರಿಗೆ ಅಡಚಣೆಯಾಗಿ ಕಟ್ಟಡದ ಹತ್ತಿರ ನೀರು ನಿಲ್ಲುತ್ತದೆ. ಸದರಿ ಜಾಗದ ಸುತ್ತಲೂ ಆರ್.ಸಿ.ಸಿ ಕಾಂಪೌಂಡ್ ಹಾಗೂ RCC Box Drain ನಿರ್ಮಾಣ ಮಾಡಲಾಗಿದ್ದು, ನೀರು ಕಂಪೌಂಡ್ ಒಳಗೆ ಬಾರದಂತೆ ಕ್ರಮ ಕೈಗೊಳ್ಳಲಾಗುತ್ತಿದೆ. |
| ಈ) | ಈ ಕಟ್ಟಡಗಳನ್ನು ಕಟ್ಟುವಾಗ ಸಾಕಷ್ಟು ಅವ್ಯವಹಾರವಾಗಿದೆ ಮತ್ತು ಮಳೆ ಬಂದಾಗ ಕಟ್ಟಡಗಳ ಸುತ್ತಲು ಎರಡು-ಮೂರು ಅಡಿಯಷ್ಟು ನೀರು ನಿಲ್ಲುತ್ತದೆ ಎಂದು ಸಮಾಜದ ಪ್ರಮುಖರು ಆರೋಪಿಸುತ್ತಿರುವ ಸಂಬಂಧ ಸೂಕ್ತ ತನಿಖೆ ಕೈಗೊಳ್ಳಲು ಕ್ರಮ ವಹಿಸಲಾಗಿದೆಯೇ; | |
| ಉ) | ಈ ಕಟ್ಟಡಗಳಿಂದ ಒಂದು ಕಿಲೋ ಮೀಟರ್ ದೂರದಲ್ಲಿರುವ ನರಸೀಪುರ ನಿಜಶರಣ ಅಂಬಿಗರ ಚೌಡಯ್ಯನವರ ಮಠಕ್ಕೆ ಈ ಕಟ್ಟಡಗಳ ನಿರ್ವಹಣೆ ಮತ್ತು ಬಳಕೆಗೆ ಕೊಟ್ಟರೆ ಸೂಕ್ತವಲ್ಲವೇ? | ಪ್ರಸ್ತುತ, ಕಾಮಗಾರಿಗಳು ಪ್ರಗತಿಯಲ್ಲಿದ್ದು, ಪೂರ್ಣಗೊಂಡ ನಂತರ ಕಟ್ಟಡಗಳ ನಿರ್ವಹಣೆ ಕುರಿತು ಸಕ್ಷಮ ಪ್ರಾಧಿಕಾರದ ಅನುಮೋದನೆ ಪಡೆದು ಕ್ರಮವಹಿಸಲಾಗುವುದು. |

ಜಸಂಇ 57 ಎಂಎಲ್ಎ 2026

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ